**ಸಾಕ್ಷಿಗೆ ದಿನಾಂಕಃ 06.01.2026 ರಂದು ಪ್ರಮಾಣ ಮಾಡಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಶ್ರೀ. ಪಿ.ಎಸ್. ವಕೀಲರಿಂದಃ**

ನಾನು ದಾವಾ ಸ್ವತ್ತನ್ನು ಖರೀದಿ ಮಾಡುವ ಸಮಯದಲ್ಲಿ ನರಸಿಂಹ ರವರ ಹೆಸರಿನಲ್ಲಿ ಆರ್.ಟಿ.ಸಿ. ಇರುವುದನ್ನು ಪರಿಶೀಲನೆ ಮಾಡಿರುತ್ತೇನೆ. 1 ನೇ ಪ್ರತಿವಾದಿಯ ಹೆಸರಿನಲ್ಲಿ ಇದ್ದ ಆರ್.ಟಿ.ಸಿಯನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ. ವಿಭಾಗವು ಯಾರ ನಡುವೆ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿಗೆ ಇದ್ದ ಸಹೋದರ ಸಹೋದರಿಯರ ಬಗ್ಗೆ ತಿಳಿದುಕೊಂಡಿರುತ್ತೇನೆ. ವಂಶವೃಕ್ಷವನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ. 1 ನೇ ಪ್ರತಿವಾದಿಗೂ ದಾವಾ ಸ್ವತ್ತಿಗೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಯು ನನಗೆ ಗೊತ್ತಿರುವುದಿಲ್ಲ. ವಾದಿಯ ತಾಯಿ ಚಿಕ್ಕತಾಯ್ಯಮ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಖಾತೆ ವರ್ಗಾವಣೆ ಆಗಬಾರದೆಂದು ತಹಸೀಲ್ದಾರ್ ಮತ್ತು ಸಂಬಂಧಪಟ್ಟ ಕಂದಾಯ ಅಧಿಕಾರಿಗಳಿಗೆ ಅರ್ಜಿ ಸಲ್ಲಿಸಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಾವುಗಳು ಅನಧಿಕೃತವಾಗಿ 1 ನೇ ಪ್ರತಿವಾದಿಯ ಹೆಸರಿಗೆ ಖಾತೆಯನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ದಾವಾ ಸ್ವತ್ತಿನ ಮೇಲೆ ಯಾವುದೇ ಹಕ್ಕು ಇಲ್ಲದೆ ಇದ್ದರೂ ಕ್ರಯಪತ್ರವನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನಿ.ಪಿ.19 ರಂತೆ ವಾದಿಯು ಖಾತೆಯನ್ನು ಸೃಷ್ಟಿಸಿ ಅಪೀಲು ಸಲ್ಲಿಸಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದು ವಜಾ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಅಪೀಲಿನಲ್ಲಿ ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣವನ್ನು ಇತ್ಯರ್ಥಪಡಿಸಿಕೊಳ್ಳಿ ಎಂದು ಆದೇಶವಾಗಿರುತ್ತದೆ ಎಂದರೆ ಸರಿ. ನಾನು ಅನಧಿಕೃತವಾಗಿ ಕಂಬು ಎನ್ನುವವರ ಸ್ವತ್ತನ್ನು ಅನಧಿಕೃತವಾಗಿ ಖಾತೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಕಂಬು ಎನ್ನುವವರು ನನ್ನ ವಿರುದ್ಧ ದಾವೆಯನ್ನು ಸಲ್ಲಿಸಿದ್ದು, ಅದು ನನ್ನ ವಿರುದ್ಧ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ದಾವಾ ಸ್ವತ್ತು ಮೂಲತಃ ಸಪ್ಪಿನ ಜವರಯ್ಯ ಎನ್ನುವವರಿಗೆ ಸೇರಿದ್ದು ಎಂದರೆ ಸರಿ. ವಾದಿಯ ಮುತ್ತಜ್ಜಿ ನಿಂಗಮ್ಮ ಎಂದರೆ ನನಗೆ ಗೊತ್ತಿಲ್ಲ. ಹೊನ್ನಯ್ಯ ಅಲಿಯಾಸ್ ಪೋಲಿಸ್ ಹೊನ್ನಯ್ಯ ಅವರ ಮಗ ಎಂದರೆ ನನಗೆ ಗೊತ್ತಿಲ್ಲ. ವಾದಿಯು ಸದರಿಯವರ ವಾರಸುದಾರರು ಎಂದರೆ

ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ವಾದಿಯ ಸಹೋದರರು ಸೊಪ್ಪನ್ನು ಬೆಳೆಯುತ್ತಿದ್ದರು ಎಂದರೆ ಸರಿಯಲ್ಲ. ವಾದಿಯ ಸ್ವತ್ತನ್ನು ನಾನು ಅನಧಿಕೃತವಾಗಿ ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಂತರ ವಾದಿಗಳು ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೂ ದಾವಾ ಸ್ವತ್ತಿಗೂ ಸಂಬಂಧ ಇಲ್ಲದ ಕಾರಣ ಅವರು ಬರೆದುಕೊಟ್ಟಿರುವ ಕ್ರಯಪತ್ರದ ಮೂಲಕ ನನಗೆ ದಾವಾ ಸ್ವತ್ತಿನ ಮೇಲೆ ಯಾವುದೇ ಹಕ್ಕು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಕ್ರಯಪತ್ರದ ಮೂಲಕ ನಾನು ದಾವಾ ಸ್ವತ್ತಿನ ಸ್ವಾಧೀನವನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತು ಬನ್ನೂರು ಪೋಲಿಸ್ ಠಾಣೆಯ ಎದುರು ಭಾಗದಲ್ಲಿ ಇರುತ್ತದೆ ಎಂದರೆ ಸರಿ. ದಾವಾ ಸ್ವತ್ತಿನ ಜಾಗದಲ್ಲಿ ಪ್ರತಿ ಗುಂಟೆಗೆ 30 ಲಕ್ಷ ಮಾರುಕಟ್ಟೆ ಮೌಲ್ಯ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಗೆ ನಗದು ರೂಪದಲ್ಲಿ ಹಣವನ್ನು ನೀಡಿರುತ್ತೇನೆ. ಹಣವನ್ನು ನಾನು 1 ನೇ ಪ್ರತಿವಾದಿಗೆ ಪಅವತಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ನಾನು ಮತ್ತು 1 ನೇ ಪ್ರತಿವಾದಿಯು ಕ್ರಯಪತ್ರವನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಸ್ವಾಧೀನಾನುಭವವನ್ನು ಹೊಂದಿಲ್ಲದೆ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಕಂದಾಯವನ್ನು ಪಾವತಿ ಮಾಡಿದ ಬಗ್ಗೆ ದಾಖಲೆ ಹಾಜರುಪಡಿಸಿರುವುದಿಲ್ಲ. ಸುಳ್ಳು ಪ್ರತಿವಾದ ಪತ್ರವನ್ನು ಸಲ್ಲಿಸಿ ಸುಳ್ಳು ಪ್ರಕರಣವನ್ನು ಸಲ್ಲಿಸಿರುತ್ತೆನೆ ಎಂದರೆ ಸರಿಯಲ್ಲ. ಕ್ರಯಪತ್ರವನ್ನು ನಾನು ಮಾಡಿಕೊಳ್ಳುವಾಗ ದಾವಾ ಸ್ವತ್ತಿನ ಮೂಲ ಮಾಲಿಕರು ಪೋಲಿಸ್ ಹೊನ್ನಯ್ಯ ಎಂದು ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**